ಅ) 1997-98ನೇ ಸಾಲಿನಲ್ಲಿ ಇದುವರೆಗೂ ರೂ. 15,94,300ಗಳನ್ನು ಬಿಡುಗಡೆ ಮಾಡಿದೆ. (ರಾಜ್ಯ ಹಣಕಾಸು ಆಯೋಗದ ಅಡಿಯಲ್ಲಿ)

ಇ) ಇಲ್ಲಾ.

ಈ) ಈವರೆಗೂ ಗೋಕಾಕ್ ನಗರಸಭೆಗೆ 10ನೇ ಹಣಕಾಸು ಆಯೋಗದ ಹಣವನ್ನು ನೀಡಿಲ್ಲ 10ನೇ ಹಣಕಾಸು ಆಯೋಗ ಹಣದಲ್ಲಿ ಕೊಣ್ಣೂರು ಪಟ್ಟಣ ಪಂಚಾಯತ್‌ಗೆ ರೂ. 4.50 ಲಕ್ಷಗಳನ್ನು ಮಂಜೂರು ಮಾಡಿದೆ.

ಶಿವಮೊಗ್ಗ ನಗರದ ಗಾಜನೂರು ಕುಡಿಯುವ ನೀರಿನ ಯೋಜನೆ

1864 - ಶ್ರೀ ಕೆ.ಎಸ್. ಈಶ್ವರಪ್ಪ (ಶಿವಮೊಗ್ಗ) : ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಶಿವಮೊಗ್ಗ ನಗರದ ಕುಡಿಯುವ ನೀರಿನ ಯೋಜನೆ ಪ್ರಾರಂಭಿಸುವ ಬಗ್ಗೆ ಸರ್ಕಾರವು ಭರವಸೆ ನೀಡಿದ್ದರೂ ಸಹ 1997ರ ಜೂನ್ ಕಳೆದರೂ ಕ್ರಮ ಕೈಗೊಳ್ಳದಿರುವುದಕ್ಕೆ ಕಾರಣವೇನು?

ಬಿ) ಶಿವಮೊಗ್ಗ ನಗರದಲ್ಲಿ ನೀರಿನ ಭವಣೆ ದಿನದಿನಕ್ಕೆ ಹೆಚ್ಚುತ್ತಿದ್ದು ತುಂಗಾ ನದಿಯ ತಪ್ಪಲಿನಲ್ಲಿರುವ ಈ ನಗರಕ್ಕೆ ನೀರಿನ ತೊಂದರೆಯನ್ನು ನೀಗಿಸುವ ಪ್ರಯತ್ನ ಮಾಡಿ ತಕ್ಷಣ ಈ ಕಾರ್ಯಯೋಜನೆಯನ್ನು ಜಾರಿಗೊಳಿಸಿ ಪೂರ್ಣಗೊಳಿಸಲಾಗುವುದೇ?

ಶ್ರೀ ಬಿ.ಎನ್. ಬಚ್ಚೇಗೌಡ (ನಗರಾಭಿವೃದ್ಧಿ ಸಚಿವರು) :

ಅ) ಶಿವಮೊಗ್ಗ ನಗರ ನೀರು ಸರಬರಾಜು ಯೋಜನೆಯು ರೂ. 500.00 ಲಕ್ಷಕ್ಕೆ ಸರ್ಕಾರವು ಅನುಮೋದನೆ ನೀಡಲಾಗಿ, ಈ ಯೋಜನೆಯನ್ನು 1902ರಲ್ಲಿ ಪ್ರಾರಂಭಿಸಲಾಯಿತು. ಈ ಮಧ್ಯೆ ಈ ಯೋಜನೆಯ ಮುಖ್ಯ ಕೊಳವೆಯ ಕಾಮಗಾರಿಯನ್ನು ವಹಿಸಿಕೊಟ್ಟಿರುವ ಗುತ್ತಿಗೆದಾರರು ದರ ಹೆಚ್ಚಳ ಕೇಳಿದ್ದು ಈ ಬಗ್ಗೆ ಸರ್ಕಾರದಿಂದ ತೀರ್ಮಾನ ಇತ್ತೀಚೆಗೆ ಆಗಿದ್ದುದರಿಂದ ಈ ಯೋಜನೆಯ ಪ್ರಗತಿಯು ಸ್ವಲ್ಪಮಟ್ಟಿಗೆ ಕುಂಠಿತವಾಗಿತ್ತು. ಆದರೆ ಈಗ ಈ ಯೋಜನೆಯ ವಿವಿಧ ಪ್ರಮುಖ ಕಾಮಗಾರಿಗಳು ತ್ವರಿತಗತಿಯಿಂದ ನಡೆಯುತ್ತಿದ್ದು ಕೆಲಸಗಳು ಮುಗಿಯುವ ಹಂತದಲ್ಲಿವೆ. ಈ ಯೋಜನೆಗೆ ವಿದ್ಯುಚ್ಛಕ್ತಿ ಒದಗಿಬಂದಲ್ಲಿ ಆಗಸ್ಟ್ 97ರಲ್ಲಿ ಚಾಲ್ತಿಗೊಳಿಸಲು ಉದ್ದೇಶಿಸಲಾಗಿದೆ. ಹಾಗೂ ಉಳಿದ ಎಲ್ಲಾ ಕೆಲಸಗಳನ್ನು ಡಿಸೆಂಬರ್ 97ರ ಅಂತ್ಯದ ವೇಳೆಗೆ ಪೂರ್ಣಗೊಳಿಸಲಾಗುವುದು.

ಆ) ಈ ಯೋಜನೆಯನ್ನು ಚಾಲೂ ಮಾಡಲು ವಿದ್ಯುತ್ ಶಕ್ತಿ ಮಂಜೂರಾತಿ ಕರ್ನಾಟಕ ವಿದ್ಯುತ್ ಮಂಡಳಿಯಿಂದ ಇನ್ನೂ ಆಗಬೇಕಾಗಿದ್ದು ವಿದ್ಯುತ್ ಸಂಪರ್ಕ ಕಲ್ಪಿಸಿದ 15 ದಿನಗಳೊಳಗಾಗಿ ಯೋಜನೆಯನ್ನು ಚಾಲೂ ಮಾಡಲಾಗುವುದು.